**<u>ದಿಃ 25-10-2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:</u>** ಅರ್ಜಿದಾರ ಪರ ವಕೀಲರು ಹಾಜರಿದ್ದು ತಮ್ಮ ಪರ ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

**<u>ಪಾಟೀ ಸವಾಲು:</u>** 2(ಎ) ಪ್ರತಿವಾದಿ ಪರ ವಕೀಲರು ಹಾಜರಿದ್ದು ತಮ್ಮ ಪರ ಪಾಟೀ ಸವಾಲು ಇಲ್ಲಾ ಎಂದು ತಿಳಿಸಿರುತ್ತಾರೆ.

**<u>ಪಾಟೀ ಸವಾಲು:</u>** 4(ಎ) ರಿಂದ (ಎಫ್) ಪ್ರತಿವಾದಿ ಪರ ವಕೀಲರಾದ ಶ್ರೀ ಸಿ ಆರ್ ಪಿ ವಕೀಲರಿಂದ

ಬೈಂದೂರು ತಾಲೂಕು, ಶಿರೂರು ಗ್ರಾಮದ ಸರ್ವೇ ನಂಬ್ರ 12/ಎ 3 ಎ 1 ರಲ್ಲಿ ಒಟ್ಟು 20.99.50 ಎಕ್ರೆ ಜಾಗ ಇರುತ್ತದೆ ಎಂದರೆ ಸರಿ. ನನ್ನ 23 ಸೆಂಟ್ಸು ಜಾಗವನ್ನು ಭೂ ಸ್ವಾಧೀನಾ ಅಧಿಕಾರಿಗಳು ಸ್ವಾಧೀನಪಡಿಸಿಕೊಂಡಿರುತ್ತಾರೆ. ಅದರಂತೆ ನನ್ನ ಪಾಲಿಗೆ ಬಂದಂತಹಾ ಹಣವನ್ನು ಸಹಾ ಪ್ರತ್ಯೇಕ ಮಾಡಿ ಅವಾರ್ಡು ಮಾಡಲಾಗಿದೆ. ಸಾಕ್ಷಿಗೆ ನ್ಯಾಯಾಲಯದ ಮುಂದಿರುವಂತಹಾ ಅರ್ಜಿದಾರರು ದಾಖಲಿಸಿದ ಅವಾರ್ಡಿನ ಫಾರ್ಮ - ಡಿ ಯನ್ನು ತೋರಿಸಿ ಅದರಲ್ಲಿ ನನ್ನ ಮತ್ತು ಶ್ರೀಮತಿ ಮರ್ಲಿ ನಾಯ್ಕ ಮತ್ತು ವಿನೋದ್ ಇವರಿಗೆ ಸಂಬಂಧಪಟ್ಟ ಒಟ್ಟು 328 ಸ್ಕ್ವಾರ್ ಮೀಟರ್ ಜಾಗಕ್ಕೆ ಸ್ವಾಧೀನಪಡಿಸಿಕೊಂಡು ಒಟ್ಟು ರೂಃ63,25,578-00 ಪರಿಹಾರ ಮೊತ್ತ ಎಂದು ನಿರ್ಧರಿಸಿದ್ದಾರೆ ಎಂದರೆ ಸಾಕ್ಷಿ ಹೌದು ಅಂತ ನುಡಿಯುತ್ತಾರೆ. ಸದ್ರಿ ದಾಖಲಾತಿಯನ್ನು ಗುರುತಿಸಲು ಪ್ರತಿವಾದಿ ಪರ ವಕೀಲರು ಕೇಳಿಕೊಂಡಿದ್ದರಿಂದ ಅವಾರ್ಡಿನಲ್ಲಿ ಫಾರ್ಮ - ಡಿ ಯನ್ನು **<u>ನಿಆರ್-11</u>** ಎಂದು ಗುರುತಿಸಲಾಯಿತು.

ನನ್ನ ಆಸ್ತಿ ಸ್ವಾಧೀನಪಡಿಸಿಕೊಂಡಂತೆ ಭೂ ಸ್ವಾಧೀನ ಅಧಿಕಾರಿಗಳು ಕಾಪ್ಸಿ ಕಾಸಿಂ, ಮಾಚ ಪೂಜಾರಿ, ರಾಮದಾಸ್ ಮೇಸ್ತ ಇವರಿಗೆ ಸೇರಿದ ಒಟ್ಟು ಆಸ್ತಿ 188 ಸ್ಕ್ವಾರ್ ಮೀಟರ್ ಸ್ವಾಧೀನಪಡಿಸಿಕೊಂಡು ಅವರಿಗೆ ರೂಃ34,86,524-00 ಪರಿಹಾರ ಹಣ ಅಂತ ನೀಡಿದ್ದಾರೆ ಎಂದರೆ ಸಾಕ್ಷಿ ಹೌದು ಅಂತ ನುಡಿಯುತ್ತಾರೆ. ನಿಆರ್-11 ರಲ್ಲಿ ಕಾಸ್ತಿ ಕಾಸಿಂ ಮತ್ತು ಇತರರಿಗೆ ಸ್ವಾಧೀನಾಧಿಕಾರಿಗಳು ನಿಗಧಿಪಡಿಸಿದ ಪರಿಹಾರದ ಮೊತ್ತದ ಮೇಲೆ ನನಗೆ ಯಾವುದೇ ಅಧಿಕಾರ ಇರುವುದಿಲ್ಲ.

<u>**ಮರು ವಿಚಾರಣೆಃ**</u> ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**